ದಿನಾಂಕ 28-05-2019 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರೆದ ಪಾಟಿ ಸವಾಲು ಃ ಶ್ರೀ ಹೆಚ್ ಎಂ ಕೆ ವಕೀಲರಿಂದ

- - - - -

ನಾನು ಯಾವುದೇ ದಾಖಲೆಗಳಿಗೆ ಸಹಿ ಮಾಡುವ ಮೊದಲು ಓದಿಕೊಂಡು ಸಹಿ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಾನು ಗ್ರಾಮದ ಮುಖಂಡ ಇದ್ದೇನೆ ಎಂದರೆ ಸರಿ. ಗ್ರಾಮಸ್ತರು ನನ್ನ ಸಲಹೆಗಳನ್ನು ಕೇಳುತ್ತಾರೆಂದರೆ ಸರಿ. ನಾನು ಗ್ರಾಮದ ಜನರ ಕಂದಾಯ ಇಲಾಖೆಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಮಾಡಿಕೊಡುತ್ತೇನೆ ಎಂದರೆ ಸರಿ. ನಮ್ಮ ಕುಲಸ್ತರಲ್ಲಿ ಯಾವುದೇ ಸಮಸ್ಯೆಗಳು ಬಂದಲ್ಲಿ ನಾನೇ ಬಗೆಹರಿಸುತ್ತೇನೆ ಎಂದರೆ ಸರಿ. ನಾನು ತಾಳೂರಿನಲ್ಲಿ ಸುಮಾರು 60 ವರ್ಷಗಳಿಂದ ವಾಸ ಇರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಅದರಲ್ಲಿರುವ ಸಹಿಯು ನಿಮ್ಮದೇ ಎಂದರೆ ಸಾಕ್ಷಿಯು ಸಹಿ ನನ್ನದಲ್ಲ ಹೆಸರು ನನ್ನದು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1996 ರಲ್ಲಿ ಲಿಂಗಮ್ಮ ರವರಿಂದ ಗಂಗಮ್ಮ ರವರಿಗೆ ಹಕ್ಕು ಬಿಡುಗಡೆ ಪತ್ರವನ್ನು ನಾನೇ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಲಿಂಗಮ್ಮ ರವರೊಂದಿಗೆ ಜಗಳ ಆಡಿರುವುದರಿಂದ ಅವರ ವಿರುದ್ದ ಈ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಲಿಂಗಮ್ಮ ರವರು ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಪವಾಡೆಪ್ಪ ರವರು ಕರೆದುಕೊಂಡು ಬಂದಿರುತ್ತಾರೆ. ನನ್ನ ಹೊಲದ ಸರ್ವೆ ನಂಬರ 4 ಇರುತ್ತದೆ. ಅದರ ವಿಸ್ತೀರ್ಣ 6 ಎಕರೆ 12 ಸೆಂಟ್ಸ ಇರುತ್ತದೆ. ಈ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ನೀಡಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ಪವಾಡೆಪ್ಪ ನಮ್ಮ ಕುಲಸ್ತರು ಇರುತ್ತಾರೆ. ಅವರು ಹಾವಿನಾಳ ಗ್ರಾಮದಲ್ಲಿ ವಾಸ ಇರುತ್ತಾರೆ. ಗಂಗಮ್ಮ ರವರು ಹಾವಿನಾಳ ಗ್ರಾಮದಲ್ಲಿ ವಾಸ ಇರುತ್ತಾರೆ. ದಾವಾ ಸ್ವತ್ತನ್ನು ಗಂಗಮ್ಮ ರವರು ಹೋಗಿ ಬಂದು ಸಾಗು ಮಾಡಿಸುತ್ತಿದ್ದಾರೆ. ವಾದಿಯರಿಗೆ ಹಾವಿನಾಳ ಗ್ರಾಮದಲ್ಲಿ ಆಸ್ತಿಗಳು ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಯವರು ಮತ್ತು ಪ್ರತಿವಾದಿ 1 ರವರು ವಿಭಾಗ ಮಾಡಿಕೊಂಡ ಬಗ್ಗೆ ನನಗೆ ಮಾಹಿತಿ ಇದ್ದರೂ ಕೂಡಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಗಂಗಮ್ಮ ರವರ ಸ್ವಂತ ಆಸ್ತಿ ಇದ್ದು ಅದನ್ನು ವಿಭಾಗದಲ್ಲಿ ಸೇರಿಸದಂತೆ ನಾನೇ ಹೇಳಿದ್ದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳ ಬಗ್ಗೆ ಮಾಹಿತಿ ಇದ್ದರೂ ಕೂಡಾ ವಾದಿಯವರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ; ಸಂಡೂರು.